RNU AIR DHARWAD

MARCH 01, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ನಾಡಿದ್ದು, ವಿಧಾನ ಮಂಡಲ ಅಧಿವೇಶನ; 7ನೇ ತಾರೀಖು, ಸಿದ್ದರಾಮಯ್ಯ ಅವರಿಂದ, ಮುಂಗಡಪತ್ರ ಮಂಡನೆ.**
- **ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, 164 ಜನರಿಗೆ, ಜೀತದಿಂದ ವಿಮುಕ್ತಿ.**
- **ಇಂದಿನಿಂದ, ಮಾರ್ಚ್ 20ರ ವರೆಗೆ, ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆ.**
- **ವಿಜಯನಗರ ಜಿಲ್ಲೆ, ‘ಹಂಪಿ ಉತ್ಸವ’ಕ್ಕೆ ವರ್ಣರಂಜಿತ ಚಾಲನೆ.**

<><><>

**ಈಗ ವಾರ್ತೆಗಳ ವಿವರ**

<><><>

**ಹಣಕಾಸು ಖಾತೆ ಹೊಂದಿರುವ, ಮುಖ್ಯಮಂತ್ರಿ ಸಿದ್ದರಾಮಯ್ಯ 7ನೇ ತಾರೀಖು ರಾಜ್ಯ ಮುಂಗಡಪತ್ರವನ್ನು ಮಂಡಿಸಲಿದ್ದಾರೆ. ನಾಡಿದ್ದು, ಮೂರನೇ ತಾರೀಖಿನಿಂದ ಆರಂಭವಾಗಲಿರುವ, ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ, ಭಾ ’ಣ ಮಾಡಲು, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ, ವಿಧಾನಮಂಡಲದ ಉಭಯ ಸದನಗಳ ಪೀಠಾಸೀನ ಅಧಿಕಾರಿಗಳು, ಆಹ್ವಾನಿಸಿ, ಮನವಿ ಮಾಡಿದರು.**

<><><>

**ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ವಿಧಾನಪರಿ ’ತ್ ಸಭಾಪತಿ ಬಸವರಾಜ ಹೊರಟ್ಟಿ ಅವರು, ರಾಜ ಭವನಕ್ಕೆ ತೆರಳಿ, ರಾಜ್ಯಪಾಲರನ್ನು ಭೇಟಿ ಮಾಡಿ, ಆಹ್ವಾನಿಸಿದರು.**

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, 164 ಜೀತದಾಳುಗಳನ್ನು ಮುಕ್ತಗೊಳಿಸಲಾಗಿದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಕೆ.ಎನ್ ಅನುರಾಧಾ ತಿಳಿಸಿದ್ದಾರೆ. ‘ಸಾಮಾಜಿಕ ಪಿಡುಗು, ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆ’ ಪ್ರತಿಜ್ಞಾ**

ವಿಧಿ ಬೋಧಿಸಿ, ಅವರು ಮಾತನಾಡಿದರು. ಪುನರ್ವಸತಿ ಕಲ್ಪಿಸಿದ, 157 ಜನ, ಜೀತ ವಿಮುಕ್ತರಿಗೆ, ತಲಾ 20 ಸಾವಿರ ರೂಪಾಯಿಗಳಂತೆ, 31 ಲಕ್ಷದ 40 ಸಾವಿರ ರೂಪಾಯಿ, ನಾಲ್ವರಿಗೆ, 79 ಸಾವಿರದ 200 ರೂಪಾಯಿಗಳ ಮಾಸಾಶನ ನೀಡಲಾಗಿದೆ. ಇಬ್ಬರಿಗೆ ನಿವೇಶನ ಹಾಗೂ 43 ಜನರಿಗೆ ಮನೆ ಒದಗಿಸಲಾಗಿದೆ ಎಂದರು.

<><><>

ಸಣ್ಣ ಹಿಡುವಳಿ ಹೊಂದಿರುವ ರೈತರು, ಸಮಗ್ರ ಕೃಷಿ ಮತ್ತು ಆಧುನಿಕ ಯಂತ್ರೋಪಕರಣಗಳ ಬಳಕೆಗೆ ಒತ್ತು ನೀಡಿದಾಗ, ಸಾಲ ಬಾಧೆಯಿಂದ ಹೊರಬಂದು, ಅಭಿವೃದ್ಧಿ ಸಾಧಿಸಲು ಸಾಧ್ಯ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯ ಸ್ವಾಮಿ ಹೇಳಿದ್ದಾರೆ. ಕೇಂದ್ರದ ಸಣ್ಣ ರೈತರ ಕೃಷಿ ವ್ಯಾಪಾರ ಒಕ್ಕೂಟ ಮತ್ತು ರೈತ ಉತ್ಪಾದಕರ ಸಂಸ್ಥೆಗಳ ವತಿಯಿಂದ, ಬೆಂಗಳೂರಿನಲ್ಲಿ ಆಯೋಜಿಸಿದ್ದ, ರೈತ ಉತ್ಪಾದಕರ ಸಂಸ್ಥೆಗಳ ಮೇಳಕ್ಕೆ, ಚಾಲನೆ ನೀಡಿ, ಅವರು ಮಾತನಾಡಿದರು. ರಾಯಚೂರು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಪತಿ ವಿ ಸ್ಣವರ್ಧನ, ಮಾತನಾಡಿ, ರೈತ ಉತ್ಪಾದಕರ ಸಂಸ್ಥೆಗಳು, ಸಣ್ಣ ಹಿಡುವಳಿ ರೈತರಿಗೆ ಆರ್ಥಿಕ ಸುದೃಢತೆ ಸಾಧಿಸಲು, ಸೇತುವೆಯಾಗಲಿವೆ ಎಂದರು.

<><><>

ಹಂಪಿ ಉತ್ಸವ ನಾಡಿನ ಹಲವು ಉತ್ಸವಗಳಿಗೆ ಪ್ರೇರಣೆ ನೀಡಿದೆ. ನಾಡು–ನುಡಿ ಹಾಗೂ ಜನರ ಉತ್ಸವವಾಗಿ ಆಚರಿಸಲು, ಮುತ್ಸದ್ದಿ ಎಂ.ಪಿ. ಪ್ರಕಾಶ ಅವರ ದೂರದೃಷ್ಟಿ ಕಾರಣ ಎಂದು, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ.  ವಿಜಯನಗರ ಜಿಲ್ಲೆ, ಹಂಪಿಯ ಗಾಯತ್ರಿ ಪೀಠದಲ್ಲಿ ನಿರ್ಮಿಸಲಾದ, ಎಮ್. ಪಿ. ಪ್ರಕಾಶ್ ವೇದಿಕೆಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರಾದ ಝಮೀರ್ ಅಹ್ಮದ್ ಖಾನ್ ಅವರೊಂದಿಗೆ, ಹಂಪಿ ಉತ್ಸವಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

<><><>

ಶಿವರಾಜ ತಂಗಡಗಿ ಧ್ವನಿ 40 ಸೆಕೆಂದುಗಳು

<><><>

ತಾಯಿ ಭುವನೇಶ್ವರಿಗೆ, ಹಂಪಿಯ ವಿದ್ಯಾರಣ್ಯ ಪೀಠದ ಶ್ರೀ ವಿದ್ಯಾರಣ್ಯ ಭಾರತಿ  ಸ್ವಾಮೀಜಿ, ಪು  ್ಪಾರ್ಚನೆ ಮಾಡಿದರು.

<><><>

ಚಿತ್ರ ನಟ ರಮೇಶ್ ಅರವಿಂದ್ ಮತ್ತು ನಟಿಯರಾದ  ಪ್ರೇಮಾ ಹಾಗೂ ಪೂಜಾ ಗಾಂಧಿ ಪಾಲ್ಗೊಂಡಿದ್ದರು.

<><><>

ಉತ್ಸವದ ಹಿನ್ನೆಲೆ, ಹಂಪಿಯ ಕಮಲಾಪುರ ಮೈದಾನದಲ್ಲಿ ಆಯೋಜಿತ, ಎತ್ತುಗಳ ಮೇಳಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ಅಹ್ಮದ್ ಚಾಲನೆ ನೀಡಿದರು. ಓಂಗೋಲ್, ಅಮೃತ ಮಹಲ್, ಕಿಲಾರಿ ಹಾಗೂ ಹಳ್ಳಿಕಾರ ತಳಿಯ 25ಕ್ಕೂ ಹೆಚ್ಚು ಜೋಡಿ ಎತ್ತುಗಳು ಗಮನ ಸೆಳೆದವು.

<><><>

ಇಂದು 20 ವಿವಿಧ ತಳಿಯ ಟಗರುಗಳ ಪ್ರದರ್ಶನ ಹಾಗೂ ನಾಳೆ, 20ಕ್ಕೂ ಹೆಚ್ಚು ವಿಶಿಷ್ಟ ತಳಿ ಶ್ವಾನಗಳ ಪ್ರದರ್ಶನ ಮತ್ತು ಪೊಲೀಸ್ ಶ್ವಾನ ಪಡೆಯ ಕೌಶಲ ಪ್ರದರ್ಶನ, ಆಯೋಜಿತವಾಗಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಇಂದಿನಿಂದ, ಮಾರ್ಚ್ 20 ರ ವರೆಗೆ, ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗಳು ನಡೆಯಲಿವೆ. ರಾಜ್ಯಾದ್ಯಂತ ಪರೀಕ್ಷಾ ಕೇಂದ್ರಗಳಲ್ಲಿ, ಪದವಿಪೂರ್ವ ಶಿಕ್ಷಣ ಇಲಾಖೆ, ಸುಗಮ ನಿರ್ವಹಣೆಗೆ, ವ್ಯಾಪಕ ಸಿದ್ಧತೆ ಕೈಗೊಂಡಿದೆ.

<><><>

ಧಾರವಾಡದಲ್ಲಿ, ಪ್ರಶ್ನೆ ಪತ್ರಿಕೆ ಸಾಗಿಸುವ, ಮಾರ್ಗಾಧಿಕಾರಿ ವಾಹನಗಳಿಗೆ, ಜಿ.ಪಿ.ಎಸ್. ಅಳವಡಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಘಟನಾವಳಿಗಳನ್ನು ವೀಕ್ಷಿಸಲು, ಲೈವ್ ವೆಬ್ ಕಾಸ್ಟಿಂಗ್ ವ್ಯವಸ್ಥೆ ಸಹ ಕಲ್ಪಿಸಲಾಗಿದೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ.

<><><>

ಪದವಿ ಪೂರ್ವ ಶಿಕ್ಷಣ ಇಲಾಖೆ ಹೊರಡಿಸಿರುವ, ಮಾರ್ಗಸೂಚಿಯಂತೆ, ಪರೀಕ್ಷೆಗೆ ಹಾಜರಾಗಲಿರುವ ವಿದ್ಯಾರ್ಥಿಗಳು ಕೈ ಗಡಿಯಾರ ಧರಿಸುವಂತಿಲ್ಲ. ಪರೀಕ್ಷಾ ಕೇಂದ್ರದಲ್ಲಿ ಮುಖ್ಯ ಅಧೀಕ್ಷಕರನ್ನು ಹೊರತು ಪಡಿಸಿ, ಯಾರೂ ಮೊಬೈಲ್ ಬಳಸುವಂತಿಲ್ಲ.

<><><>

ರಾಜ್ಯ ರಸ್ತೆ ಸಾರಿಗೆ ನಿಗಮ, ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ, ತಮ್ಮ ವಾಸ ಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರದ ವರೆಗೆ, ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ, ನಿಗಮದ ನಗರ, ಹೊರ ವಲಯ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ, ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಆಕಾಶವಾಣಿಯ ಜನಪ್ರಿಯ, 'ಮನ್ ಕಿ ಬಾತ್'ನ 119ನೇ ಆವೃತ್ತಿಯಲ್ಲಿ, ಬರುವ 8ನೇ ತಾರೀಖು, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆ, ಮಹಿಳೆಯರ ಕರ್ತೃತ್ವ ಶಕ್ತಿ ಸಂಭ್ರಮಿಸುವಂತೆ, ಕರೆ ನೀಡಿದ್ದಾರೆ.

<><><>

'ಎಲ್ಲ ಮಹಿಳೆಯರು ಮತ್ತು ಹುಡುಗಿಯರಿಗೆ, ಹಕ್ಕು ಮತ್ತು ಸಮಾನತೆ' ಎಂಬ ಧ್ಯೇಯದೊಂದಿಗೆ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಗುತ್ತಿದೆ. 'ವಿಶ್ವಾದ್ಯಂತ ಮಹಿಳಾ ಸಮಾನತೆಗಾಗಿ, ಕರ್ತೃತ್ವ ಶಕ್ತಿಯ ವೇಗವರ್ಧಿಸೋಣ' ಎಂಬ ಘೋಷಣೆಯೊಂದಿಗೆ, ಆಚರಿಸಲು ಪ್ರಧಾನಮಂತ್ರಿ ಕೋರಿದ್ದಾರೆ.

<><><>

ಚಿಂದಿ ಆಯ್ದು, ಬಡತನದ ಬದುಕು ನಡೆಸುವ, ಗೋಸಾವಿ ಸಮುದಾಯಕ್ಕೆ ಸೇರಿದ ಬಾಲಕಿ, ಧಾರವಾಡದ ಲಕ್ಷ್ಮೀಸಿಂಗನ ಕೆರೆ ನಿವಾಸಿ, ವೈಶಾಲಿ ಗೋಸಾವಿ, ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದಲ್ಲಿ, ಫ್ಯಾಷನ್ ಡಿಸೈನಿಂಗ್ ಕೋರ್ಸ್ ಕಲಿತು, ಸ್ವಯಂ ಉದ್ಯೋಗಿಯಾಗಿ ಗಮನ ಸೆಳೆದಿದ್ದಾರೆ. ಕನ್ನಡ ಮಾತನಾಡಲು ಬಾರದ ವೈಶಾಲಿ ಪರವಾಗಿ, ಅವರ ಕರ್ತೃತ್ವ ಶಕ್ತಿಯ ಬಗ್ಗೆ ವಿವರಿಸಿದ್ದಾರೆ, ಸ್ವಾಮಿ ವಿವೇಕಾನಂದ ಯುತ್ ಮೂವ್ಮೆಂಟ್, ಪ್ರಾದೇಶಿಕ ಕಚೇರಿಯ ಮಾನವ ಸಂಪನ್ಮೂಲ ವಿಭಾಗದ ಸಂಯೋಜಕಿ, ಇವ್ಯಾಂಜಲಿನ್ ಸಂಪತ್‌ಕುಮಾರ.

<><><>

ಇವ್ಯಾಂಜಲಿನ್ ಸಂಪತ್‌ಕುಮಾರ ಧ್ವನಿ 45 ಸೆಕೆಂದುಗಳು

<><><>

ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲೂಕು, ಬೆಳವಡಿಯಲ್ಲಿ, ವೀರ ರಾಣಿ ಬೆಳವಡಿ ಮಲ್ಲಮ್ಮ ಅಭಿವೃದ್ಧಿ ಪ್ರಾಧಿಕಾರ ರಚಿಸಲು, ಪ್ರಸ್ತಾವ ಸಲ್ಲಿಸುವುದಾಗಿ, ಬೈಲಹೊಂಗಲ ಶಾಸಕ ಮಹಾಂತೇಶ ಕೌಜಲಗಿ, ಚನ್ನಮ್ಮನ ಕಿತ್ತೂರು ಶಾಸಕ ಬಾಬಾಸಾಹೇಬ್ ಪಾಟೀಲ ತಿಳಿಸಿದ್ದಾರೆ. ಬೆಳವಡಿ ಮಲ್ಲಮ್ಮನವರ ಉತ್ಸವದ ಅಂಗವಾಗಿ, ವೀರ ಜ್ಯೋತಿಯನ್ನು ಸ್ವಾಗತಿಸಿ, ಬೆಳವಡಿ ಸಂಸ್ಥಾನದ ಧ್ವಜಾರೋಹಣ ನೆರವೇರಿಸಿ, ಅವರು ಮಾತನಾಡಿದರು. ಬೆಳವಡಿ ಅಭಿವೃದ್ಧಿಗೆ, ಆದ್ಯತೆ ನೀಡುವುದಾಗಿ, ಶಾಸಕ ದ್ವಯರು ತಿಳಿಸಿದರು. ಬಸವಜಯ ಮೃತ್ಯುಂಜಯ ಸ್ವಾಮೀಜಿ, ಸಾನಿಧ್ಯ ವಹಿಸಿದ್ದರು.

<><><>

2021 ರಲ್ಲಿ ನಡೆದಿದ್ದ, ಸ್ಥಳೀಯ ಪ್ರಾಧಿಕಾರಗಳಿಂದ, ವಿಧಾನ ಪರಿಷತ್‌ಗೆ ಪ್ರತಿನಿಧಿ ಆಯ್ಕೆ ಚುನಾವಣೆಯ, ಮರು ಮತ ಎಣಿಕೆ ಕಾರ್ಯ, ಚಿಕ್ಕಮಗಳೂರಿನ ಐ.ಡಿ.ಎಸ್.ಜಿ. ಮಹಾವಿದ್ಯಾಲಯದಲ್ಲಿ, ಸುಗಮವಾಗಿ ನಡೆಯಿತು. ಮತ ಎಣಿಕೆ ವಿವರವನ್ನು, ಮುಚ್ಚಿದ ಲಕೋಟೆಯಲ್ಲಿ, ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದು, ಫಲಿತಾಂಶವನ್ನು ನ್ಯಾಯಾಲಯ ಪ್ರಕಟಿಸಲಿದೆ.

<><><>

ದಕ್ಷಿಣಕನ್ನಡ ಜಿಲ್ಲೆಯಲ್ಲಿ, ಬಿಸಿ ಗಾಳಿ ಬೀಸುತ್ತಿದ್ದು, ವಿಶೇಷವಾಗಿ ಮಕ್ಕಳ ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ ಇದೆ; ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ, ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಎಚ್.ಆರ್. ತಿಮ್ಮಯ್ಯ ಕೋರಿದ್ದಾರೆ. ಮಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಶಾಲೆ-ಕಾಲೇಜುಗಳಲ್ಲಿ, ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ, ಕಾಳಜಿ ವಹಿಸುವಂತೆ ಅವರು ಸೂಚಿಸಿದ್ದಾರೆ.

<><><>

ಕಾರವಾರದಲ್ಲಿ ಗರಿಷ್ಠ 37 ದಶಾಂಶ 4 ಡಿಗ್ರಿ ಸೆಲ್ಸಿಯಸ್ ಹಾಗೂ ಚಾಮರಾಜ ನಗರದಲ್ಲಿ ಕನಿಷ್ಠ 14 ದಶಾಂಶ 3 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ರಾಜ್ಯಾದ್ಯಂತ ಒಣಹವೆ ಮುಂದುವರೆದಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ಭಾರತದ ಮೊದಲ ರಾಷ್ಟ್ರಪತಿ, ಭಾರತ ರತ್ನ ಬಾಬು ರಾಜೇಂದ್ರ ಪ್ರಸಾದ್ ಅವರ ಪುಣ್ಯ ಸ್ಮರಣೆ ಹಿನ್ನೆಲೆ, ಗಣ್ಯರು ನಿನ್ನೆ ಗೌರವಾರ್ಪಿಸಿದರು.

<><><>

ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ವೆಂಕಟೇಶನ್, ಧಾರವಾಡ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ, ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

<><><>

ಇಂದು, ವಿಶ್ವ ಪೌರ ರಕ್ಷಣಾ ದಿನಾಚರಣೆ.

<><><>

ಮೈಸೂರಿನ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಪವರ್ ಫೈನಾನ್ಸ್ ಕಾರ್ಪೊರೇ 'ನ್ ಆಫ್ ಇಂಡಿಯಾ ನೀಡುವ ರೇಟಿಂಗ್ನಲ್ಲಿ, 'ಎ' ಶ್ರೇಣಿಗೆ ಉನ್ನತೀಕರಣಗೊಂಡಿದೆ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ, ಭಾರತದ ಅತಿ ದೊಡ್ಡ ಗ್ರೀನ್ ಫೀಲ್ಡ್ ದೇಶಿ ಸರಕು ಸಾಗಣೆ ಟರ್ಮಿನಲ್ ಕಾರ್ಯಾರಂಭಿಸಿದೆ.

<><><>

ಕೆಲಸದ ಸ್ಥಳದಲ್ಲಿ, ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ತಡೆ ಕಾಯ್ದೆ– 2013ರ ಅಡಿ, ಯಾದಗಿರಿ ಜಿಲ್ಲೆಯ, ಎಲ್ಲ ಇಲಾಖೆಗಳ ವ್ಯಾಪ್ತಿಯಲ್ಲಿ, 300ಕ್ಕೂ ಹೆಚ್ಚು, ಆಂತರಿಕ ದೂರು ವಿಚಾರಣಾ ಸಮಿತಿ ರಚಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಬಿ. ಸುಶೀಲಾ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ನಾಡಿದ್ದು, ವಿಧಾನ ಮಂಡಲ ಅಧಿವೇಶನ; 7ನೇ ತಾರೀಖು, ಸಿದ್ದರಾಮಯ್ಯ ಅವರಿಂದ, ಮುಂಗಡಪತ್ರ ಮಂಡನೆ.
- ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, 164 ಜನರಿಗೆ, ಜೀತದಿಂದ ವಿಮುಕ್ತಿ.
- ಇಂದಿನಿಂದ, ಮಾರ್ಚ್ 20ರ ವರೆಗೆ, ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆ.
- ವಿಜಯನಗರ ಜಿಲ್ಲೆ, 'ಹಂಪಿ ಉತ್ಸವ'ಕ್ಕೆ ವರ್ಣರಂಜಿತ ಚಾಲನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>